ಸ್ವಾಮಿಯಿಂದ ದೂರವಿದ್ದು, ನಾವಿಬ್ಬರೂ ಆ ಕಾರಣದಿಂದ ಕ್ಷುಬ್ಧರಾಗಿದ್ದೇವೆ.
ಎಂದಿನವರೆಗೆ, ಓ ಸ್ವಾಮಿ? –ಆ ತರುಣಿ ಚೀರುತ್ತಾಳೆ.'
(ಆಧಾರ: ಪ್ರೊ. ಯಾಮುನಾಚಾರ್ ಅವರ ಇಂಗ್ಲೀಷ್ ಅನುವಾದ)

ನಮ್ಮಾಳ್ವಾರ್‌ರಂತೆ ಅನೇಕ ಮಧ್ಯಕಾಲೀನ ಸಂತರು-ಸಂತಕವಿಗಳು ಮಧುರ ಭಕ್ತಿಯನ್ನು ಆಚರಿಸಿದ್ದಾರೆ: ನರಸಿ ಮೆಹ್ತಾ, ಚೈತನ್ಯ ಮಹಾಪ್ರಭು, ವಲ್ಲಭಾಚಾರ್ಯ, ಗುಲಾಬ್‌ರಾವ್ ಮಹಾರಾಜ, ದೇವನಾಥ್, ಇತ್ಯಾದಿ.

ಸಗುಣ ಬ್ರಹ್ಮನನ್ನಾರಾಧಿಸುವ ಮತ್ತು ಅವತಾರ ಕಲ್ಪನೆಯನ್ನೊಪ್ಪಿಕೊಂಡಿರುವ ಹಿಂದೂ ಧರ್ಮೀಯರಿಗೆ ಮಧುರ ಭಕ್ತಿ ಕೈಗೂಡುವುದು ಆಶ್ಚರ್ಯವೇನಲ್ಲ. ಆದರೆ, ನಿರ್ಗುಣ ಬ್ರಹ್ಮನನ್ನಾರಾಧಿಸುವ ಮತ್ತು ಅವತಾರ ಕಲ್ಪನೆಯನ್ನು ಒಪ್ಪದ ಇಸ್ಲಾಂ ಧರ್ಮಾನುಯಾಯಿಗಳು ಮಧುರ ಭಕ್ತಿಯನ್ನು ಆಚರಿಸುವುದು ನಿಜಕ್ಕೂ ಆಶ್ಚರ್ಯಕರ. (ಇವರಲ್ಲಿ ಹೆಚ್ಚಿನವರು ಸೂಫಿ ಪಂಥಕ್ಕೆ ಸೇರಿದವರು; ಆದರೆ ಎಲ್ಲರೂ ಅಲ್ಲ.) ಇದಕ್ಕೆ ಕಾರಣ ಅಂದು (16–18ನೆಯ ಶತಮಾನಗಳಲ್ಲಿ) ಉತ್ತರ ಭಾರತದಲ್ಲಿ ಹರಡಿದ್ದ ಚೈತನ್ಯ ಹಾಗೂ ವಲ್ಲಭಾಚಾರ್ಯ ಇವರುಗಳ ವೈಷ್ಣವ ಪಂಥದ ಪ್ರಭಾವವಿರಬಹುದು, ಅಥವಾ ಹೊಸ ವಿಚಾರಗಳಿಗೆ ಹಾಗೂ ಅನುಭವಗಳಿಗೆ ಸದಾ ಮುಕ್ತವಾಗಿದ್ದ ಸೂಫಿಪಂಥವಿರಬಹುದು. ನಮ್ಮಾಳ್ವಾರ್ ಮತ್ತು ಇತರ ಮಧುರ ಭಕ್ತರಂತೆ ಸೂಫಿಗಳೂ 'ನಮ್ಮ ಮೂಲಸ್ಥಾನ ಪರಮಾತ್ಮನ ಸಾನ್ನಿಧ್ಯ; ಅನೇಕ ಕಾರಣಗಳಿಂದಾಗಿ ಆ ಸಾನ್ನಿಧ್ಯದಿಂದ ನಾವು ದೂರವುಳಿದು ನರಮಾನವರಾಗಿದ್ದೇವೆ; ನಮ್ಮ ಈ ನರ ಜನ್ಮದ ಏಕ ಮಾತ್ರ ಉದ್ದೇಶ ಮತ್ತೆ ಆ ಪರಮಾತ್ಮನ ಸಾನ್ನಿಧ್ಯವನ್ನು ಪಡೆಯುವುದು' ಎಂದಿದ್ದಾರೆ. ಈ ಕಾರಣದಿಂದಲೇ ಸೂಫಿ ಸಂತರು ಸತ್ತಾಗ ಅವರ ಅನುಯಾಯಿಗಳು ಆ ಘಟನೆಯನ್ನು ಸಂಭ್ರಮದಿಂದ ಆಚರಿಸುತ್ತಾರೆ. 'ಉರುಸ್' ಎಂದರೆ ಅರೇಬಿಕ್ ಭಾಷೆಯಲ್ಲಿ 'ವಿವಾಹ.' ತಮ್ಮ ಸಂತನು ಮತ್ತೆ ಮೂಲದ ದೈವ ಸಾನ್ನಿಧ್ಯಕ್ಕೆ ತೆರಳಿದ್ದಾನೆ ಎಂಬುದು ಅವರ ಸಂಭ್ರಮಕ್ಕೆ ಕಾರಣ. ಬಾಬಾ ಫ಼ರೀದ್ ಈ ಪರಿಕಲ್ಪನೆಯನ್ನು ಮಾನವ-ವಿವಾಹದ ರೂಪಕದ ಮೂಲಕ ಹೀಗೆ ವಿವರಿಸುತ್ತಾರೆ:

ವಧುವಿನ ವಿವಾಹ ದಿನವು ಅವಳು ಹುಟ್ಟುವುದಕ್ಕೆ ಮೊದಲೇ ಆಗಿರುವ ವಿಧಿಬರಹ.
ಅಂದು, ಅವಳು ಅಲ್ಲಿಯವರೆಗೂ ಕೇವಲ ಕೇಳಿದ್ದ, ಮೃತ್ಯುದೂತ ತನ್ನ ಮುಖವನ್ನು ತೋರಿಸುತ್ತಾನೆ;
ಆ ಮೃತ್ಯುವು ದೇಹದ ಮೂಳೆಗಳನ್ನು ಮುರಿದು, ಅಸಹಾಯಕ ಆತ್ಮವನ್ನು ಹೊರಗೆಳೆಯುತ್ತಾನೆ.
ಜನ್ಮಪೂರ್ವದಲ್ಲಿಯೇ ನಿಶ್ಚಯಿಸಲಾಗಿದ್ದ ವಿವಾಹಸಮಯವನ್ನು ದೂರಮಾಡುವುದು ಅಸಾಧ್ಯ; ನಿನ್ನ ಆತ್ಮಕ್ಕೆ ಇದನ್ನು ತಿಳಿಸಿ ಹೇಳು.
ಆತ್ಮವು ವಧು, ಮೃತ್ಯು ವರ; ಮೃತ್ಯುವು ಅವಳನ್ನು ವಿವಾಹವಾಗಿ ಕರೆದುಕೊಂಡು ಹೋಗುತ್ತಾನೆ.
ದೇಹವು ಸ್ವತಃ ತನ್ನ ಕೈಗಳಿಂದಲೇ ಅವಳನ್ನು ದೂರಮಾಡಿದ ಮೇಲೆ, ಆ ಆತ್ಮವು ಯಾರ ಕೊರಳನ್ನು ತಬ್ಬಿಕೊಳ್ಳುತ್ತದೆ?
ನರಕಕ್ಕಿರುವ ಸೇತುವೆ ಕೂದಲಿಗಿಂತಲೂ ಸೂಕ್ಷ್ಮ; ನಿನ್ನ ಕಿವಿಯಾರೆ ಅದನ್ನು ಕೇಳಿಲ್ಲವೇನು?
ಫ಼ರೀದ್; ಕರೆಯು ಬಂದಾಗಿದೆ, ಯಾರೂ ನಿನ್ನನ್ನು ದೋಚದಂತೆ ಈಗ ನೀ ಎಚ್ಚರದಿಂದಿರು.

ಜೀವಾತ್ಮನಿಗೆ ಪರಮಾತ್ಮನ ಬಗ್ಗೆ ಇರುವ ಪ್ರೇಮವನ್ನು ವರ್ಣಿಸಲು ದಾಂಪತ್ಯ ರೂಪಕದ ಬಳಕೆ ಸೂಫಿ ಕಾವ್ಯದಲ್ಲಿ ಎಂಟನೆಯ ಶತಮಾನದಲ್ಲಿ ಬಸ್ರಾ ನಗರದಲ್ಲಿದ್ದ ರಾಬಿಯಾ ಅಲ್-ಅದಾವಿಯಾ ಎಂಬ ಸೂಫಿ ಸ್ತ್ರೀಯಿಂದ ಪ್ರಾರಂಭವಾಯಿತೆಂದು ತನ್ವೀರ್ ಅಂಜುಮ್ ಎಂಬ ವಿದ್ವಾಂಸರು ಮಂಡಿಸುತ್ತಾರೆ. ಅವಳು ದೇವರಲ್ಲಿ ನಿಷ್ಕಾಮ ಪ್ರೇಮವನ್ನು ಹೊಂದಿರಬೇಕೆಂದು, ಆ ಪ್ರೇಮ ಸ್ವರ್ಗದ ಕಾಮನೆಯಿಂದಾಗಲಿ ನರಕದ ಭೀತಿಯಿಂದಾಗಲಿ ಇರಬಾರದೆಂದು ಮತ್ತೆ ಮತ್ತೆ ಬೋಧಿಸಿದಳು. ಅನಂತರ ಜಲಾಲುದ್ದೀನ್ ರೂಮಿ, ಅಮೀರ್ ಖುಸ್ರೋ, ಇತ್ಯಾದಿ ಅನೇಕ ಸೂಫಿ ಕವಿಗಳು ಈ ರೂಪಕವನ್ನು ವ್ಯಾಪಕವಾಗಿ ಹಾಗೂ ಹೃದಯಸ್ಪರ್ಶಿಯಾಗಿ ಬಳಸಿದ್ದಾರೆಂದೂ,